ಮಾಡುವ ಬಗ್ಗೆ ಘೋಷಣೆ ಮಾಡುವಂಥ ಸದ್ಬುದ್ಧಿ ಭಗವಂತ ನಿಮಗೆ ಕೊಡಲಿ ಎಂದು ಹೇಳಿ ಈ ಉತ್ತರದಲ್ಲಿ ರಾಜ್ಯದ ಜನರಿಗೆ ಯಾವುದೇ ಒಂದು ಹಿತ ಇಲ್ಲದೇ ಇರುವುದರಿಂದ ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ ತಾವು ಏಪ್ರಿಲ್ ಫೂಲ್ ಮಾಡುವಂಥ ಕೆಲಸ ಮಾಡುತ್ತಿದ್ದೀರಿ ಎಂದು ಹೇಳಿ ನಾವು ಹೊರಗೆ ಹೋಗುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಇದು ಏಪ್ರಿಲ್ ಫೂಲ್ ಬಜೆಟ್ ಎಂದು ಹೇಳಿ ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಬಂಗಾರಪ್ಪ: ಸಭಾತ್ಯಾಗ ಮಾಡುವುದಕ್ಕೋಸ್ಕರ ಅವರು ಇಲ್ಲಿಗೆ ಬಂದಿದ್ದಾರೆಂದು ನನಗೆ ಈಗ ಗೊತ್ತಾಯಿತು. ಏಕೆಂದರೆ ರೈತರ ವಿಚಾರದಲ್ಲಿ ಅವರು ಹೇಳಿಬಿಟ್ಟು ಹೊರಟು ಹೋಗುತ್ತಿದ್ದಾರೆ. ನಾನು ಏನು ಹೇಳಿದ್ದೇನೆ. ರೈತರ ಬಗ್ಗೆ ಬಹಳ ವಿಚಾರಗಳು ಇವೆ. ಅಂಶಗಳು ಇವೆ ಆ ಬಗ್ಗೆ ಚರ್ಚೆ ಮಾಡಿದ್ದೇವೆ. ತಾವು ಹೇಳಿದ್ದೀರಿ ನಮ್ಮ ಹತ್ತಿರ ಕೂಡ ಇವೆ. ಈ ಬಗ್ಗೆ ನಾನು ಪ್ರತ್ಯೇಕ ಹೇಳಿಕೆ ಕೊಡುತ್ತೇನೆಂದು ಹೇಳಿದರೂ ಕೂಡ ಅವರು ಸಭಾತ್ಯಾಗ ಮಾಡುತ್ತೇವೆಂದರೆ ನಮ್ಮ ಹೇಳಿಕೆ ಮತ್ತೊಂದು ಕೇಳಲಿಕ್ಕೆ ಇವರಿಗೆ ಇಂಟರೆಸ್ಟ್ ಇಲ್ಲ ಎಂದು ಇದರಿಂದಲೇ ಗೊತ್ತಾಗುತ್ತದೆ. ಈಗಲಾದರೂ ಕೂಡ ಅವರಿಗೆ ಸದ್‌ಬುದ್ಧಿ ಬರಲಿ. ನಾನು ಏನು ಹೇಳುತ್ತೇನೆ ಎಂದು ಅರ್ಥಮಾಡಿಕೊಂಡು ಬೇಕಾದರೆ ಏನಾದರೂ ಪಾಯಿಂಟ್ ಹುಡುಕಿ ವಾಚ್ ಮಾಡಲಿಕ್ಕೆ ಬರುತ್ತದೆ. ನಾನು ಇನ್ನೂ ಹೇಳಿಕೆ ಕೊಟ್ಟಿಲ್ಲ ಈಗಲೇ ವಾಕೌಟ್ ಅಂದರೆ ಇದಕ್ಕೆ ಬುಡ ತುದಿ ಒಂದೂ ಇಲ್ಲ ಯಾವ ರೀತಿ ವಾದ ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಪಾಟೀಲ್ ಬಾಬಗೌಡ ರುದ್ರಗೌಡ: ರೈತರ ಸಾಲದ ಮೇಲೆ ಸ್ಟ್ಯಾಂಪ್ ಡ್ಯೂಟಿ ಹಾಕಿದ್ದೀರಿ, ವ್ಯಾಪಾರಸ್ಥರು ಕಾರ್ಖಾನೆ ಮಾಲೀಕರ ಸಾಲದ ಮೇಲೆ ಸ್ಟ್ಯಾಂಪ್ ಡ್ಯೂಟಿಯನ್ನು ಹಾಕಿದ್ದೀರಾ?

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಉಪಾಧ್ಯಕ್ಷಣೆಯವರೆ ಮಾನ್ಯ ಸದಸ್ಯರ ಹಲವಾರು ಬೇಡಿಕೆಗಳಲ್ಲಿ ಇದೂ ಕೂಡ ಒಂದು. ನಾನು ಉತ್ತರವನ್ನು ಕೊಡುವಾಗ ಈ ಎಲ್ಲ ಅಂಶಗಳನ್ನೂ ಕವರ್ ಮಾಡುತ್ತೇನೆ. ಇದರಲ್ಲಿ ಎಲ್ಲವನ್ನೂ ನಾವು ಮಾಡುತ್ತೇವೆಂದು ಅಲ್ಲ ಯಾವುದು ಆಗುತ್ತದೆ ಅದನ್ನು ಮಾಡುತ್ತೇವೆ. ಮಾಡುವುದಕ್ಕಾಗದಿದ್ದರೆ ಏನು ಕಾರಣ ಏತಕ್ಕೆ ಸಾಧ್ಯವಿಲ್ಲ ಎಂಬುದನ್ನು ಹೇಳುತ್ತೇನೆ. ಆ ಸ್ಟೇಟ್‌ಮೆಂಟ್ ಬಂದಮೇಲೆ ನಾನು ತಮಗೆ ಹೇಳುತ್ತೇನೆ.

ಅಧ್ಯಕ್ಷರು: ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ:

31-3-1991-92 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ: 1 ರಿಂದ 61ರವರೆಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ,